# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 112 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಪ್ರಸ್ತುತ ಬಿ.ಪಿ.ಎಲ್, ಎ.ಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ಎಷ್ಟು; ಬಿ.ಪಿ.ಎಲ್ ಪಡಿತರ ಚೀಟಿಯನ್ನು ಪಡೆಯಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು;</td><td>ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಅಂತ್ಯೋದಯ ಅನ್ನ ಯೋಜನೆ, ಆದ್ಯತಾ ಮತ್ತು ಆದ್ಯತೇತರ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿರುತ್ತವೆ.<br><table><tr><th>ಅಂತ್ಯೋದಯ ಅನ್ನ ಯೋಜನೆ</th><th>ಆದ್ಯತಾ</th><th>ಆದ್ಯತೇತರ</th><th>ಒಟ್ಟು</th></tr><tr><td>10,84,009</td><td>1,16,52,660</td><td>25,00,790</td><td>1,52,37,459</td></tr></table><br>ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಈ ಕೆಳಕಂಡ (ಅನರ್ಹತೆಯನ್ನಾಧರಿಸಿ ಹೊರಗಿಡುವ) ಮಾನದಂಡಗಳನ್ನು ಜಾರಿಯಲ್ಲಿರುತ್ತವೆ.<br>1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>2. ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br>3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.</td></tr>
</table>

| | | |
|---|---|---|
| ಆ | 2023 ಏಪ್ರಿಲ್ ನಿಂದ ಜೂನ್-2024 ತಿಂಗಳ ಅಂತ್ಯದವರೆಗೆ ಬಿ.ಪಿ.ಎಲ್, ಎ.ಪಿ.ಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಕುಟುಂಬಗಳ ಸಂಖ್ಯೆ ಎಷ್ಟು; ಹೊಸ ಬಿ.ಪಿ.ಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಿದ ದಿನಾಂಕದಿಂದ ಎಷ್ಟು ಸಮಯದ ಒಳಗಾಗಿ ಅವರಿಗೆ ಪಡಿತರ ಚೀಟಿಯನ್ನು ನೀಡಲಾಗುತ್ತದೆ; ಅರ್ಜಿ ಸಲ್ಲಿಸಲು ಅವಕಾಶ ನೀಡಿಲ್ಲದಿದ್ದಲ್ಲಿ, ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ದಿನಾಂಕ: 01.04.2023 ಯಿಂದ 31.03.2024 ವರೆಗೆ 1,05,217 ಆದ್ಯತಾ ಪಡಿತರ ಚೀಟಿ ಹಾಗೂ 23,463 ಆದ್ಯತೇತರ ಪಡಿತರ ಚೀಟಿ ಕೋರಿ ಅರ್ಜಿಗಳು ಸ್ವೀಕೃತವಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ: ಆನಾಸ 211 ಡಿಆರ್‌ಎ 2021, ದಿನಾಂಕ: 29.09.2023 ರಲ್ಲಿ 2,95,986 ಅರ್ಜಿಗಳ ವಿಲೇವಾರಿ ಬಗ್ಗೆ ಆದೇಶಿಸಲಾಗಿರುತ್ತದೆ. ಇದರಲ್ಲಿ 62,595 ಅರ್ಜಿಗಳನ್ನು ಅನುಮೋದಿಸಿದ್ದು, 4,679 ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ ಬಾಕಿ ಇರುವ 2,28,712 ಅರ್ಜಿಗಳ ಕುರಿತು ಸ್ಥಳ ಪರಿಶೀಲನೆ ಮಾಡಿ ತ್ವರಿತವಾಗಿ ವಿಲೇವಾರಿ ಮಾಡಲು ರಾಜ್ಯದ ಜಂಟಿ/ಉಪ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ. |
| ಇ | ಅನ್ನಭಾಗ್ಯ ಯೋಜನೆಯಡಿ ಪಡಿತರ ಬದಲಾಗಿ 2023-24 ಮತ್ತು 2024-25ನೇ ಸಾಲಿನಲ್ಲಿ ಇಲ್ಲಿಯವರೆ ಎಷ್ಟು ಮೊತ್ತವನ್ನು ಪಡಿತರ ಚೀಟಿದಾರರಿಗೆ ಪಾವತಿ ಮಾಡಲಾಗಿದೆ; ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು; ಪಾವತಿ ಮಾಡಲಾದ ಫಲಾನುಭವಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು; | ಜುಲೈ-2023 ರಿಂದ ಮೇ 2024 ಮಾಹೆಯ DBT ಮೊತ್ತವನ್ನು ಅರ್ಹ ಫಲಾನುಭವಿಗಳಿಗೆ ಸಂದಾಯ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ.ಸಂ | ಮಾಹೆ | ಫಲಾನುಭವಿಗಳ ಸಂಖ್ಯೆ | ವರ್ಗಾಯಿಸಲಾದ ಒಟ್ಟು ಮೊತ್ತ (ಕೋಟಿಗಳಲ್ಲಿ) |
|---|---|---|---|
| 1 | ಜುಲೈ-2023 | 3,45,38,958 | 566.05 |
| 2 | ಆಗಸ್ಟ್-2023 | 3,69,36,906 | 605.88 |
| 3 | ಸೆಪ್ಟೆಂಬರ್-2023 | 38262103 | 627.73 |

| | | | |
|---|---|---|---|
| 4 | ಅಕ್ಟೋಬರ್-2023 | 39274053 | 644.45 |
| 5 | ನವೆಂಬರ್-2023 | 39714391 | 651.73 |
| 6 | ಡಿಸೆಂಬರ್-2023 | 39925249 | 655.22 |
| 7 | ಜನವರಿ-2024 | 40243966 | 660.5 |
| 8 | ಫೆಬ್ರುವರಿ-2024 | 4,08,87,361 | 671.13 |
| 9 | ಮಾರ್ಚ್-2024 | 4,09,34,896 | 671.91 |
| 10 | ಏಪ್ರಿಲ್-2024 | 4,07,55,079 | 666.96 |
| 11 | ಮೇ-2024 | 4,07,76,390 | 666.31 ಪ್ರಗತಿಯಲ್ಲಿರುತ್ತದೆ |

ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಮಾಹೆ | ಒಟ್ಟುಫಲಾನುಭವಿಗಳ ಸಂಖ್ಯೆ | ಪರಿಶಿಷ್ಟ ಜಾತಿ(SC) | ಪರಿಶಿಷ್ಟ ಪಂಗಡ (ST) |
|---|---|---|---|---|
| 1 | ಜುಲೈ-2023 | 3,454,38,958 | 6,30,754 | 2,67,625 |
| 2 | ಆಗಸ್ಟ್-2023 | 3,69,36,906 | 48,03,498 | 21,28,612 |
| 3 | ಸೆಪ್ಟೆಂಬರ್-2023 | 3,82,62,103 | 59,22,246 | 26,16,944 |
| 4 | ಅಕ್ಟೋಬರ್-2023 | 3,92,74,053 | 61,70,922 | 27,07,979 |
| 5 | ನವೆಂಬರ್-2023 | 3,97,14,391 | 62,48,485 | 27,39,940 |
| 6 | ಡಿಸೆಂಬರ್-2023 | 3,99,25,249 | 55,97,365 | 24,85,302 |
| 7 | ಜನವರಿ-2024 | 4,02,43,966 | 59,15,002 | 25,90,678 |

| | | | | |
|---|---|---|---|---|
| 8 | ಫೆಬ್ರುವರಿ-2024 | 4,08,87,361 | 59,96,707 | 26,24,656 |
| 9 | ಮಾರ್ಚ್-2024 | 4,09,34,896 | 60,01,209 | 26,27,989 |
| 10 | ಏಪ್ರಿಲ್-2024 | 4,07,55,079 | 69,99,089, | 29,74,920 |
| 11 | ಮೇ-2024 | 4,07,76,390 | 71,06,174 | 30,15,764 |
| | ಒಟ್ಟು | 43,22,49,352 | 6,13,91,451 | 2,67,80,409 |

| | | |
|---|---|---|
| ಈ | ಪಡಿತರ ಚೀಟಿಗಳ ತಿದ್ದುಪಡಿ ಹಾಗೂ ಹೊಸ ಪಡಿತರ ಚೀಟಿ ಪಡೆಯಲು ಜನರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರಿ ಯೋಜನೆಗಳಿಗೆ ಹಾಗೂ ಆರೋಗ್ಯ ಸಂಬಂಧಿಸಿದ ಸವಲತ್ತುಗಳನ್ನು ಪಡೆಯಲು ಪಡಿತರ ಚೀಟಿಯನ್ನು ಅತ್ಯವಶ್ಯಕವಾಗಿದ್ದು ಸರಿಯಾದ ಸಮಯದಲ್ಲಿ ಸಾರ್ವಜನಿಕರಿಗೆ ಪಡಿತರ ಚೀಟಿಯ ತಿದ್ದುಪಡಿ ಮತ್ತು ವಿತರಣೆ ಮಾಡದಿದ್ದಲ್ಲಿ ಅವರನ್ನು ವಂಚಿಸಿದಂತೆ ಆಗುವುದಿಲ್ಲವೇ? | ತುರ್ತು ವೈದ್ಯಕೀಯ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಅರ್ಹ ಆದ್ಯತಾ ಪಡಿತರ ಚೀಟಿದಾರರಿಗೆ ನಿರಂತರವಾಗಿ ಪರಿಶೀಲಿಸಿ ಹೊಸ ಆದ್ಯತಾ ಪಡಿತರ ಚೀಟಿ ನೀಡುವ ಕಾರ್ಯ/ಪಡಿತರ ಚೀಟಿ ತಿದ್ದುಪಡಿ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. |

ಆನಾಸ 192 ಡಿಆರ್‌ಎ 2024

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು